

‘ಕನ್ನಡ ಕೋಗಿಲೆ’ ಷೋನಲ್ಲಿ ಚಂದನ್ ಶೆಟ್ಟಿ

ಸುತ್ತುತ್ತಿದ್ದರು. ಪಂಢರಿಬಾಯಿ ತಮ್ಮದೇ ಆದ ನಾಟಕ ಕಂಪನಿ ನಡೆಸುತ್ತಿದ್ದರು. ಸಿನಿಮಾದಲ್ಲಿ ನಟಿಸಿದ ನಂತರವೂ ರಾಜ್‌ಕುಮಾರ್, ಬಾಲಕೃಷ್ಣ, ನರಸಿಂಹರಾಜು ನಾಟಕಗಳಲ್ಲಿ ಬಣ್ಣ ಹಚ್ಚಿರುವುದಿದೆ. ಆದರೆ, ತೊಂಬತ್ತರ ದಶಕದ ನಂತರ ರಂಗಭೂಮಿಯ ಸ್ಥಾನದಲ್ಲಿ ಕಿರುತೆರೆ ಬಂದಿತು. ಒಳ್ಳೆಯ ಸಂಭಾವನೆಯೂ ಇದ್ದುದರಿಂದ ಕಲಾವಿದರು ಧಾರಾವಾಹಿಗಳಲ್ಲಿ ನಟಿಸುವುದಕ್ಕೆ ಉತ್ಸಾಹದಿಂದಲೇ ತೊಡಗಿಕೊಂಡರು. ಮೈನಾವತಿ, ಭಾರತಿ ವಿಷ್ಣುವರ್ಧನ್ ನಟನೆಯ ಮೆಗಾ ಧಾರಾವಾಹಿಗಳು ಪ್ರಸಾರವಾದವು.

ಸಿನಿಮಾ ನಟರು ಧಾರಾವಾಹಿಗಳಲ್ಲಿ ನಟಿಸುವುದು ಅಚ್ಚರಿಯೂ ಅಲ್ಲ, ಅಸಹಜವೂ ಅಲ್ಲ ಎನ್ನುವ ಸಂದರ್ಭ ಇಂದಿನದು. ಆದರೆ, ಒಂದು ಕಾಲದಲ್ಲಿ ಸಿನಿಮಾ ಮಂದಿ ಟೀವಿ ಎಂದರೆ ಮೂಗು ಮುರಿಯುತ್ತಿದ್ದುದೂ ಇತ್ತು. 1993ರ ಸುಮಾರಿಗೆ ಸಿನಿಮಾ ಕಲಾವಿದರ ಸಂದರ್ಶನಗಳನ್ನು ಆಧರಿಸಿದ ‘ತೆರೆಮರೆ ತಾರೆಗಳು’ ಕಾರ್ಯಕ್ರಮವೊಂದನ್ನು ಕಿರುತೆರೆಗಾಗಿ ರೂಪಿಸುತ್ತಿದ್ದ ಸಂದರ್ಭದಲ್ಲಿ, ‘ಟೀವಿಗೆ ಸಂದರ್ಶನವಾ?’ ಎಂದು ಕೆಲವರು ಉದ್ಗರಿಸಿದ್ದನ್ನು ಲಿಂಗದೇವರು ನೆನಪಿಸಿಕೊಳ್ಳುತ್ತಾರೆ.

## ರಿಯಾಲಿಟಿ ಷೋ ಎನ್ನುವ ಅಕ್ಷಯಪಾತ್ರೆ

ಕಿರುತೆರೆ ಹಾಗೂ ಬೆಳ್ಳಿತೆರೆ ಕೊಡುಕೊಳ್ಳುವಿಕೆಯ ಎರಡನೇ ಹಂತವಾಗಿ ರಿಯಾಲಿಟಿ ಷೋಗಳನ್ನು ಗುರ್ತಿಸಬೇಕು. ಕೌಟುಂಬಿಕ ಕಲಹಗಳನ್ನು ಬಗೆಹರಿಸುವ ರೂಪದ ‘ಬದುಕು ಜಟಕಾಬಂಡಿ’ ರೀತಿಯ ರಿಯಾಲಿಟಿ ಷೋಗಳು ಮೊದಲಿಗೆ ಆರಂಭವಾದವು. ಆದರೆ, ರಿಯಾಲಿಟಿ ಷೋಗಳ ಅಬ್ಬರ ತಾರಕಕ್ಕೇರಿದ್ದು ‘ಕನ್ನಡದ ಕೋಟ್ಯಧಿಪತಿ’ ಹಾಗೂ ‘ಬಿಗ್ ಬಾಸ್’ಗಳ ಮೂಲ. ಪುನೀತ್ ರಾಜ್‌ಕುಮಾರ್ ನಡೆಸಿಕೊಡುತ್ತಿದ್ದ ‘ಕನ್ನಡದ ಕೋಟ್ಯಧಿಪತಿ’ ಹಾಗೂ ಸುದೀಪ್ ನಿರೂಪಣೆಯ ‘ಬಿಗ್ ಬಾಸ್’ ಷೋಗಳು ಕನ್ನಡ ಕಿರುತೆರೆಗೆ ಅದ್ದೂರಿತನ ತಂದುಕೊಟ್ಟವು.

ರಮೇಶ್ ಅರವಿಂದ್ (ಪ್ರೀತಿಯಿಂದ ರಮೇಶ್, ವೀಕೆಂಡ್ ವಿಥ್ ರಮೇಶ್) ಹಾಗೂ ಗಣೇಶ್ (ಸೂಪರ್ ಮಿನಿಟ್) ನಡೆಸಿಕೊಡುತ್ತಿದ್ದ ಷೋಗಳು ಕೂಡ ಅಪಾರ ಜನಪ್ರಿಯತೆ ಗಳಿಸಿದವು. ದರ್ಶನ್ ಅವರನ್ನು ಹೊರತುಪಡಿಸಿದರೆ ಕನ್ನಡ ಚಿತ್ರರಂಗದ ಈ ಹೊತ್ತಿನ ಮುಂಚೂಣಿ ನಾಯಕ ನಟರೆಲ್ಲ ಒಂದಲ್ಲಾ ಒಂದು ರೀತಿಯಲ್ಲಿ ಟೀವಿ ಷೋಗಳಲ್ಲಿ ಭಾಗವಹಿಸಿದವರೇ ಆಗಿದ್ದಾರೆ. ಈ ಷೋಗಳ ಜನಪ್ರಿಯತೆ ಎಷ್ಟರಮಟ್ಟಿಗಿತ್ತೆಂದರೆ, ಟೀವಿ ಮುಂದೆ ಕೂರುವ ಜನ ಚಿತ್ರಮಂದಿರಗಳಿಗೆ ಬರುತ್ತಿಲ್ಲ ಎನ್ನುವ ಕಾರಣವೊಡ್ಡಿ ಕೆಲವು ಸಿನಿಮಾ ನಿರ್ಮಾಪಕರು, ನಾಯಕನಟರು ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವುದನ್ನು ಪ್ರತಿಬಂಧಿಸುವ ಕುರಿತು ಧ್ವನಿಯೆತ್ತಿದ್ದರು.

ಶಿವರಾಜ್‌ಕುಮಾರ್, ರವಿಚಂದ್ರನ್, ಜಗ್ಗೇಶ್, ಪ್ರಿಯಾಮಣಿ ಅವರಂಥ ಪ್ರಸಿದ್ಧರು ಕೂಡ ಟೀವಿ

## ಕಲಾವಿದೆಯರಿಗೆ ಘನತೆಯ ಉದ್ಯೋಗ



ಸಿನಿಮಾಗಳ ಕಥೆ ನಾಯಕ ಪ್ರಧಾನವಾಗಿದ್ದರೆ, ಕಿರುತೆರೆಗಳ ಕಥೆಗಳಲ್ಲಿ ನಾಯಕಿಗೆ ಹೆಚ್ಚು ಒತ್ತು. ಧಾರಾವಾಹಿಗಳನ್ನು ನೋಡುವವರಲ್ಲಿ ಕೂಡ ಹೆಣ್ಣುಮಕ್ಕಳ ಸಂಖ್ಯೆಯೇ ಹೆಚ್ಚು. ಈ ಕಾರಣದಿಂದಲೇ ಇರಬೇಕು, ನಟನೆಯ ಹಂಬಲವುಳ್ಳ ಹೆಣ್ಣುಮಕ್ಕಳ ಪಾಲಿಗೆ ಕಿರುತೆರೆ ಸಾಕಷ್ಟು ಉದ್ಯೋಗಾವಕಾಶಗಳನ್ನು ರೂಪಿಸಿದೆ.

ತಮಿಳಿನಲ್ಲಿ ಖುಷ್ಬೂ ಹಾಗೂ ರಾಧಿಕಾ ಶರತ್‌ಕುಮಾರ್ ಅವರು ಧಾರಾವಾಹಿಗಳ ನಿರ್ಮಾಣ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದನ್ನು ನಿರ್ದೇಶಕಿ ಸುಮನ್ ಕಿತ್ತೂರು ನೆನಪಿಸಿಕೊಳ್ಳುತ್ತಾರೆ. ಕೆ. ಬಾಲಚಂದರ್ ಅವರಂಥ ಹಿರಿಯ ನಿರ್ದೇಶಕರು ಕಿರುತೆರೆಗೆ ಹೊರಳಿದ್ದನ್ನು, ಗೀತಾ ಅವರಂಥ ಹಿರಿಯ ನಟಿ ಧಾರಾವಾಹಿಗಳಲ್ಲಿ ನಟಿಸುವುದನ್ನು ಅವರು ಉದಾಹರಿಸುತ್ತಾರೆ.

‘ಧಾರಾವಾಹಿಗಳಲ್ಲಿನ ನಟನೆ ಹೆಣ್ಣುಮಕ್ಕಳ ಪಾಲಿಗೆ ಗೌರವಯುತವಾದ ಉದ್ಯೋಗವಾಗಿ ರೂಪುಗೊಂಡಿದೆ. ಬೆಳಗ್ಗೆ 9ರಿಂದ ಸಂಜೆ 6ರವರೆಗಿನ ಉದ್ಯೋಗಕ್ಕೆ ಒಳ್ಳೆಯ ಸಂಭಾವನೆಯೂ ದೊರೆಯುತ್ತಿದೆ. ಜನಪ್ರಿಯ ಕಲಾವಿದೆಯರಿಗೆ ತಿಂಗಳಿಗೆ ಕನಿಷ್ಠ ಇಪ್ಪತ್ತು ದಿನ ಉದ್ಯೋಗ ದೊರೆಯುತ್ತಿದೆ’ ಎನ್ನುವುದು ಸುಮನ್ ಅನಿಸಿಕೆ